ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ

C. C. No.839/2022

CW.5-PW.5

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:-ದಿನಾಂಕ: 20.11.2025

| | |
|---|---|
| ಸಾಕ್ಷಿಯ ಹೆಸರು:- | ರವೀಂದ್ರ |
| ತಂದೆ ಹೆಸರು :- | ತುಕಾರಾಮ |
| ವಯಸ್ಸು :- | 32 ವರ್ಷ |
| ಉದ್ಯೋಗ :- | ಚಾಲಕ ವೃತ್ತಿ |
| ವಾಸ ಸ್ಥಳ :- | ರಾಜೋಳಾ ಗ್ರಾಮ, ತಾ.ಬಸವಕಲ್ಯಾಣ |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾಸಾ.1 ಇವರು ನನ್ನ ಚಿಕ್ಕಪ್ಪನ ಮಗ ಇರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯಸ್ಥರು ಇರುತ್ತಾರೆ.

ದಿನಾಂಕ 09.05.2022 ರಂದು ಸಂಜೆ 4.50 ಗಂಟೆ ಸುಮಾರಿಗೆ ನಮ್ಮೂರಿನ ಅಂಬೇಡ್ಕರ್ ಸರ್ಕಲ್ ಹತ್ತಿರ ನಾನು ಗಾಡಿಯಲ್ಲಿ ಕುಳತಿದ್ದಾಗ, ಚಾಸಾ.1 ಇವರ ಹೋಟೆಲಿನಲ್ಲಿ ಜಗಳ ಆಗುತ್ತಿತ್ತು. ಆದ್ದರಿಂದ ನಾನು ಸದರಿ ಹೋಟೆಲಿನ ಬಳಿ ಹೋಗಿರುತ್ತೇನೆ. ಅಲ್ಲಿ ಆರೋಪಿತರು ಚಾಸಾ.1 ಇವರ ಜೊತೆ ಜಗಳ ಮಾಡುತ್ತಿದ್ದರು. ನಾನು ಕೇಳಲು ಹೋದಾಗ ಆರೋಪಿ ನಂ.1 ಇವರು ಬಡಿಗೆಯಿಂದ ನನ್ನ ತಲೆಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.2 ಇವರು ಕಾಲಿನಿಂದ ಒದ್ದಿರುತ್ತಾರೆ. ಆರೋಪಿ ನಂ.7 ಇವರು ಬಡಿಗೆಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ಆದ್ದರಿಂದ ನನ್ನನ್ನು ಬಸವಕಲ್ಯಾಣದ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿರುತ್ತಾರೆ. ಆ ನಂತರ ಏನಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ.

*ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಲು ಎ.ಪಿ.ಪಿ., ರವರು ಅನುಮತಿ ಕೋರಿರುತ್ತಾರೆ, ಆ ಪ್ರಕಾರ ಅನುಮತಿ ನೀಡಲಾಯಿತು.*

ಪಾಟೀ ಸವಾಲು :-ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಆರೋಪಿತರು ಚಾಸಾ.1 ಇವರೊಂದಿಗೆ ಜಗಳ ಆಡುತ್ತಿರುವಾಗ ನಾನು, ಚಾಸಾ.6, 7, 10, 11 ಮತ್ತು 12 ಇವರು ಜಗಳ ಬಿಡಿಸಲು ಬಂದಿರುತ್ತೇವೆಂದರೆ ಸರಿ. ಆಗ ಆರೋಪಿ ನಂ.2 ಇವರು ಚಾಸಾ.1 ಇವರ ಹೆಬ್ಬಟ್ಟಿಗೆ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿ ನಂ.1 ಇವರು ಚಾಸಾ.1 ಇವರಿಗೆ ಕಾಲಿನಿಂದ ಒದ್ದಿರುತ್ತಾರೆಂದರೆ ಸರಿ. ಆರೋಪಿ ನಂ.4 ಇವರು ಚಾಸಾ.1 ಇವರ ಕೈ ತಿರುವಿ, ಆರೋಪಿ ನಂ.3 ಇವರು ಕೂದಲು ಹಿಡಿದು ಎಳೆದಾಡಿರುತ್ತಾರೆಂದರೆ ಸರಿ. ಆರೋಪಿ ನಂ.2 ಇವರು ಚಾಸಾ.4 ಇವರಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿ ನಂ.4 ಇವರು ಚಾಸಾ.4 ಇವರ ಕೆನ್ನೆಗೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿ ನಂ.14 ಇವರು ಸಹ ಚಾಸಾ.4 ಇವರಿಗೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಜಗಳ

ಬಿಡಿಸಿಕೊಳ್ಳಲು ಹೋದ ನನಗೆ ಆರೋಪಿ ನಂ.1 ಮತ್ತು 2 ಇವರು ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿ ನಂ.7 ಇವರು ನನ್ನನ್ನು ನೆಲಕ್ಕೆ ಕೆಡವಿ ಕೈಗಳಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿ. ಈ ಕುರಿತು ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು-ಮಾ.1 ರಿಂದ 6 ಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u>: ಆರೋಪಿತರ ಪರ: ಶ್ರೀ.ಡಿ.ಜಿ.ಕೆ ವಕೀಲರಿಂದ.

ಚಾಸಾ.1 ಇವರು ನನ್ನ ಸಹೋದರ ಎಂದರೆ ಸರಿ. ಆರೋಪಿ ನಂ.2 ಇವರು ನನ್ನ ವಿರುದ್ಧ ಮತ್ತು ನನ್ನ ಕುಟುಂಬದವರ ವಿರುದ್ಧ ಬಸವಕಲ್ಯಾಣ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ 2024 ರಲ್ಲಿ ಅವರ ಪರವಾಗಿರುತ್ತದೆಂದರೆ ಸರಿ. ದಾವೆಯಲ್ಲಿದ್ದ ನಮ್ಮ ಕುಟುಂಬದವರು ಈ ಕೇಸಿನಲ್ಲಿ ಸಾಕ್ಷಿದಾರರು ಇರುತ್ತಾರೆಂದರೆ ಸರಿ. ಜಗಳವಾದಾಗ ಸ್ಥಳದಲ್ಲಿ ಸಾಕಷ್ಟು ಜನರು ಇದ್ದರು. ಸದರಿ ಎಲ್ಲರ ಹೆಸರು ನನಗೆ ಹೇಳಲು ಬರುವುದಿಲ್ಲ. ನಾನು ಹೇಳಿರುವಂತೆ ಯಾವದೇ ಜಗಳಾಗಿರುವುದಿಲ್ಲ, ಆರೋಪಿತರು ನನಗೆ, ಚಾಸಾ.1, 4 ಇವರಿಗೆ ಮು-ಮಾ.1 ರಿಂದ 6 ಗಳಿಂದ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ಸುಳ್ಳು ದೂರು ಸಲ್ಲಿಸಿದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-